ಅದಕ್ಕವಳು ಇನ್ನೊಬ್ಬನನ್ನು ಹುಡುಕಿಕೊಳ್ಳಬೇಡವೇ? ಇಲ್ಲದಿದ್ರೆ ಮಜವಾಗಿರೋದು ಹೇಗೆ?'' ಅಂತ ವಿಷಣ್ಣನಾಗಿ ನಕ್ಕ...

ನನ್ನ ಮುಖ ಚಿಕ್ಕದಾಯ್ತು.

ನಾನು ಬಿಡಿಗಾಸೂ ಬೇಡವೆಂದಿದ್ದೆ. ಸ್ವಾಭಿಮಾನದಿಂದ ಇದ್ದೊಬ್ಬ ಮಗನ ಜವಾಬ್ದಾರಿಯನ್ನೂ ಹೊತ್ತಿದ್ದೆ. ಗಂಡನೇನೂ ತಗೋ ಅಂತ ಬಲವಂತ ಮಾಡಿರಲಿಲ್ಲ. ಸಂಬಂಧ ಇಟ್ಟುಕೊಂಡ ಕೇರಳದ ನರ್ಸನ್ನೇ ರಾಜಾರೋಷವಾಗಿ ಮೆರೆಸಹತ್ತಿದ್ದ. ಅದೇ ಊರಿನಲ್ಲಿದ್ದರೆ ಅವಮಾನ ಅಂತ ವಿದೇಶ ಸೇರಿದ್ದೆ. ಇಲ್ಲಿಗೆ ಬಂದ ಎಂಟು ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ನನ್ನ ಭವಿಷ್ಯವನ್ನು ರೂಪಿಸಿಕೊಳ್ಳಲು ಓದನ್ನು ಮುಂದುವರೆಸುವ ಸಾಹಸಕ್ಕೆ ಕೈ ಹಾಕಿದ್ದೆ. ಮಗನನ್ನು ಗೆಳತಿಯ ಮನೆಯಲ್ಲಿ ಬಿಟ್ಟು ನಾಲ್ಕು ದಿನಗಳ ಈ ತರಬೇತಿಗೆಂದು ಬಂದಿದ್ದೆ.

ವೈಯಕ್ತಿಕ ವಿಚಾರವಾದ ಕಾರಣ ನಾವ್ಯಾರೂ ಅಲೆಕ್ಸ್‌ನನ್ನು ಹೆಚ್ಚು ಕೇಳಲಿಲ್ಲ. ಆದರೆ, ಕ್ಯಾಟ್ ವಿಚಾರಕ್ಕೆ ಬಿದ್ದಂತೆ ಕಂಡಿತು. ತನ್ನ ಸರದಿಯನ್ನು ಒಪ್ಪಿಕೊಂಡು ಸ್ವಗತಕ್ಕೆನ್ನುವಂತೆ ತನ್ನ ಕತೆ ಹೇಳತೊಡಗಿದಳು.

ಅವಳ ಗಂಡ ಜಾರ್ಜ್ ಅಂತರರಾಷ್ಟ್ರೀಯ ಪೈಲಟ್ ಅಗಿದ್ದ. ಒಮ್ಮೆ ಕೆಲಸಕ್ಕೆ ಹೋದರೆ ಹಿಂತಿರುಗಲು ವಾರಗಳೇ ಹಿಡಿಯುತ್ತಿದ್ದವು. ಆಗೆಲ್ಲ ಅವಳು ತನ್ನ ಕುದುರೆಗಳೊಂದಿಗೆ ಬದುಕುವುದನ್ನು ಕಲಿತಿದ್ದಳು. ಬೇಜಾರಿಗೆ ಅಂತ ಶುರು ಮಾಡಿದ ಅವಳ ದೈನಂದಿನ ಮೈಲುಗಟ್ಟಲೆ ಓಟ ಅವಳ ದೇಹವನ್ನು ದಂಡಿಸುತ್ತಿತ್ತು. ಕಾಲ ಕಳೆದಂತೆ ಶರೀರ ಕೊಬ್ಬೇ ಇಲ್ಲದೆ ಸಪೂರವಾಗಿತ್ತು. ಪ್ರತಿದಿನ ತನ್ನ ಓಟ, ಕುದುರೆಗಳ ಕೆಲಸ, ವೃತ್ತಿಯ ಕೆಲಸಗಳನ್ನು ಮುಗಿಸುವುದರಲ್ಲಿ ಅವಳ ಸಮಯ ಕಳೆಯುತ್ತಿತ್ತು. ಒಂಟಿ ಬದುಕನ್ನು ತಳ್ಳಲು ಅವಳು ಬೇರೆ ದಾರಿಗಳನ್ನು ಆರಿಸಿಕೊಂಡಿದ್ದಳು. ನನಗೆ ಅವಳ ಕ್ಲಿಷ್ಟಕರ ದೈನಂದಿನ ದೇಹದಂಡನೆಯ ತಪಸ್ಸುಗಳು ಕೂಡ ಅವಳ ಒಂಟಿತನದ ಕಾರಣದಿಂದಲೇ ಅನ್ನಿಸಿತು.

ಕೆಲವೊಮ್ಮೆ ಇದು ನನ್ನದು ಕೂಡ ಅನ್ನಿಸಿತು. ಗಂಡಸಿನ ಸಂಪರ್ಕವಿಲ್ಲದೆ ದಶಕವೇ ಕಳೆದುಹೋಗಿತ್ತು. ಯಾರ ಸಾಂಗತ್ಯವೂ ಇರಲಿಲ್ಲ. ಪರದೇಶದಲ್ಲಿ ಒಂಟಿಯಾಗಿದ್ದೆ. ವೃತ್ತಿಯೇ ನನ್ನ ಉಸಿರಾಗಿತ್ತು. ಅದನ್ನೆಲ್ಲ ಮರೆಯಲು ಆಗಾಗ ಮೊದಲಿನಂತೆ ಕೆಲವು ಸಾಹಸ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದೆ. ಒಂದಷ್ಟು ಹೊಸತನಕ್ಕಾಗಿ ಚಡಪಡಿಸುತ್ತಿದ್ದೆ.

ಇದನ್ನೆಲ್ಲ ಕ್ಯಾಟ್ ನಿರ್ಭಿಡೆಯಿಂದ

